ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್

ಸಿ.ಸಿ. ನಂ.4732-2023

ಪಿಡಬ್ಲ್ಯೂ -10

ಸಿಡಬ್ಲ್ಯೂ-11

ಸಾಕ್ಷಿದಾರನ ಹೆಸರುಃ- ಎಂ.ಹೆಚ್ ರಘು

ತಂದೆ ಹೆಸರು ಲೇಟ್ ಹಾಲಪ್ಪ

ವಯಸ್ಸು 47 ವರ್ಷ

ಉದ್ಯೋಗ ಅಭಕಾರಿ ಉಪ ಅಧೀಕ್ಷಕರು

ವಾಸ ಹಾಸನ ಉಪ ವಿಭಾಗ, ಹಾಸನ

**ಸಾಕ್ಷಿಗೆ ದಿಃ 15.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ**

27.07.2019 ರಿಂದ 07.07.2020ರ ವರೆವಿಗೂ ನಾನು ಕುಣಿಗಲ್ ವಲಯದಲ್ಲಿ ಅಬಕಾರಿ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.08.2019 ರಂದು ಚಾಸಾ 2 ಅವರಿಂದ ಪ್ರಕರಣದ ಕಡತವನ್ನು ಸ್ವಿಕರಿಸಿ ಪ್ರಕರಣದಲ್ಲಿ ರಾಸಾಯನಿಕ ಪರೀಕ್ಷೆಗೆ ತಗೆದಿದ್ದ ಮಾದರಿಯನ್ನು ದಿಃ 30.10.2019 ರಂದು ಚಾಸಾ 10 ಅವರಿಂದ ಕಳುಹಿಸಿ ದಿಃ 21.11.2019 ರಂದು ವರದಿಯ ಪಡೆದಿರುತ್ತೇನೆ. ದಿಃ 02.01.2020 ರಂದು ಚಾಸಾ 8 ಮತ್ತು 10 ಅವರ ಹೇಳಿಕೆ ಪಡೆದಿರುತ್ತೇನೆ. ದಿಃ 03.01.2020 ರಂದು ಚಾಸಾ9 ಅವರ ಹೇಳಿಕೆ ಪಡೆದಿರುತ್ತೇನೆ. ದಿಃ 13.01.2020 ರಂದು ತಾವರೆಕೆರೆ ಗ್ರಾಮ ಪಂಚಾಯಿತಿಗೆ ಅಂಗಡಿಯ ಮಾಲಿಕರ ದಾಖಲೆಯನ್ನು ನೀಡುವಂತೆ ಪತ್ರ ವ್ಯವಹಾರ ಮಾಡಿರುತ್ತೇನೆ. ದಿಃ 16.01.2020 ರಂದು ಸದರಿ ಅಂಗಡಿ ಸೋಮಶೇಖರ ಅವರ ಮಾಲಿಕತ್ವದಲ್ಲಿ ಇಲ್ಲದೆ ಇರುವ ಬಗ್ಗೆ ದಾಖಲೆಯನ್ನು ಪಡೆದಿರುತ್ತೇನೆ. ನಂತರ ತನಿಖೆ ಮುಕ್ತಾಯಗೊಳಿಸಿ ದಿಃ 29.01.2020 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ.

ಎಫ್.ಎಸ್ ಎಲ್ ನೀಡಿದ ಪತ್ರ ಅನ್ನು ನಿ.ಪಿ 5 ಎಂದು ಸಹಿ ನಿ.ಪಿ 5(ಎ) ಎಂದು ಗುರುತಿಸಲಾಯಿತು. ಎಫ್.ಎಸ್.ಎಲ್ ವರದಿಯನ್ನು ನಿ.ಪಿ 6 ಎಂದು ಗುರುತಿಸಲಾಯಿತು.

ತಾವರೆಕೆಗೆ ಗ್ರಾಮ ಪಂಚಾಯಿತಿಗೆ ನೀಡಿದ ಪತ್ರವನ್ನು ಅನ್ನು ನಿ.ಪಿ 7 ಎಂದು ಸಹಿ ನಿ.ಪಿ 7(ಎ) ಎಂದು ಗುರುತಿಸಲಾಯಿತು. ತಾವರೆಕೆಗೆ ಗ್ರಾಮ ಪಂಚಾಯಿತಿಯವರು ನೀಡಿದ ಪತ್ರವನ್ನು ನಿ.ಪಿ 8 ಎಂದು ಸಹಿ ನಿ.ಪಿ 8(ಎ) ಎಂದು ಗುರುತಿಸಲಾಯಿತು. ಮು. ಮಾ. ಅನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿ.ಎ.ಆರ್ ವಕೀಲರಿಂದ.**

ದಿನಾಂಕ 29.07.2019 ರಂದು ನಾನು ಕುಣಿಗಲ್ ಅಭಕಾರಿ ನೀರಿಕ್ಷಯ ಕಚೇರಿಯಲ್ಲಿ ಕೆಲಸದಲ್ಲಿದ್ದೆ. ನನಗೆ ಅಕ್ರಮ ಮದ್ಯ ಮಾರಾಟದ ಬಗ್ಗೆ ಮಾಹಿತಿ ಬಂದಿರುವುದಿಲ್ಲ. ಹೊನ್ನೆಗೌಡನದೊಡ್ಡಿಯಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ಚಾಸಾ 2 ಅವರ ಅದೇ ದಿನ ತಿಳಿಸಿರುತ್ತಾರೆ. ಸದರಿ ದಿನಾಂಕದಂದು ನಾನು ಸಿಬ್ಬಂದಿಗಳನ್ನು ಯಾವ ಯಾವ ಕರ್ತವ್ಯಕ್ಕೆ ನೇಮಕ ಮಾಡಿದ ಬಗ್ಗೆ ನನಗೆ ನೆನಪಿಲ್ಲ ಆದರೆ ಡೈರಿಯಲ್ಲಿ ನಮೂದು ಇರುತ್ತದೆ ಎಂದು ಹೇಳುತ್ತಾರೆ. ನಮ್ಮ ಸಿಬ್ಬಂದಿ ನಾನು ಕಚೇರಿಯಲ್ಲಿರುವಾಗ ಅಕ್ರಮ ಮದ್ಯ ಮಾರಾಟದ ಬಗ್ಗೆ ಪರವಾನಿಗೆ ಪಡೆಯಬೇಕೆಂದರೆ ಸಾಕ್ಷಿ ಅವಶ್ಯಕತೆ ಇರುವುದಿಲ್ಲ ಅವರಿಗೆ ಅಧಿಕಾರ ಇರುತ್ತದೆಂದು ಹೇಳುತ್ತಾರೆ.

ನಾನು ಚಾಸಾ 2 ಅವರಿಗೆ ಯಾವ ಕಾರಣಕ್ಕೆ ಮಾಹಿತಿ ನೀಡಿರುವುದಿಲ್ಲವೆಂದು ನಾನು ಕೇಳಿರುವುದಿಲ್ಲ. ಘಟನೆಯ ನಂತರ ಮತ್ತು ಕಡತವನ್ನು ಪಡೆದ ನಂತರ ಸ್ಥಳ ಪರಿಶೀಲನೆಗೆ ಹೋಗಿರುವುದಿಲ್ಲ. ಪೆಟಿ ಅಂಗಡಿಯನ್ನು ನಾನು ನೋಡಿರುತ್ತೇನೆ ಆದರ ಬಾಗಿಲು ಯಾವ ದಿಕ್ಕಿಗೆ ಇದೆ ಎಂದು ನನಗೆ ನೆನಪಿಲ್ಲ ಅದರ ವಿಸ್ತಿರ್ಣ 10 X 15 ಆಗಿರುತ್ತದೆಂದು ಹೇಳುತ್ತಾರೆ. ಸದರಿ ವಿಸ್ತೀರ್ಣದ ಬಗ್ಗೆ ಎಲ್ಲಿಯೂ ನಮೂದು ಮಾಡಿರುವುದಿಲ್ಲ. ಸದರಿ ಪೆಟಿ ಅಂಗಡಿ ಆರೋಪಿಗೆ ಸೇರಿದ ಬಗ್ಗೆ ದಾಖಲು ನೀಡುವಂತೆ ಪಂಚಾಯಿತಿಗೆ ಪತ್ರ ಬರೆದಿರುತ್ತೇನೆ ಸದರಿ ಅಂಗಡಿ ಆರೋಪಿಗೆ ಸೇರಿರುತ್ತದೆಂದು ನಿಮಗೆ ಯಾರು ಹೇಳಿರುತ್ತಾರೆ ಎಂದರೆ ಸಾಕ್ಷಿ ಲೋಕಾಯುಕ್ತರಿಂದ ಮಾಹಿತಿ ಬಂದಿರುತ್ತದೆಂದು ಹೇಳುತ್ತಾರೆ.

ಸದರಿ ಪೆಟಿ ಅಂಗಡಿ ಆರೋಪಿಗೆ ಸೇರಿಲ್ಲವೆಂದು ಗೊತ್ತಾದ ಬಳಿಕ ನಾನು ಸರಕಾರಕ್ಕೆ ಅಂಗಡಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಪತ್ರ ವ್ಯವಹಾರ ಮಾಡಿರುವುದಿಲ್ಲ. ಮು. ಮಾ. ಅನ್ನು ನನ್ನ ವಶಕ್ಕೆ ದಿನಾಂಕ 03.08.2019 ರಂದು ನೀಡಿರುತ್ತಾರೆ. ಸದರಿ ಮು. ಮಾ. ಗಳನ್ನು ಸೀಜ್ ಮಾಡಿದ್ದು ಅವುಗಳನ್ನು ನಾನು ನೋಡಿರುವುದಿಲ್ಲ. ಜಪ್ತು ಮಾಡಿದ ಲೀಸ್ಟನಲ್ಲಿಹೈ ವೂರ್ಡ್ಸ ಪಂಚ ಪೈನ್ ವಿಸ್ಕಿ ಇರುವುದಿಲ್ಲ ಅದು ಹೇಗೆ ಬಂದಿರುತ್ತದೆಂದು ನನಗೆ ಗೊತ್ತಿಲ್ಲ. ದಿಃ 03.08.2019 ರಿಂದ 30.10.2019ರವೆರೆಗೂ ನಿಮ್ಮ ಬಳಿ ಇಟ್ಟುಕೊಳ್ಳಲು ನಾನು ಪರವಾನಿಗೆ ಪಡೆದಿರುತ್ತೇನೆ ಆದರೆ ಈ ಬಗ್ಗೆ ಅಂತಿಮ ವರದಿಯಲ್ಲಿ ಯಾವುದೇ ಬರವಣಿಗೆ ಇರುವುದಿಲ್ಲ.

ಆರೋಪಿಗೆ ಗೊತ್ತಿಲ್ಲದಂತೆ ಮು. ಮಾ. ಗಳನ್ನು ನಾನೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಚಾಸಾ 2 ಅವರು ಮು. ಮಾ. ಗಳನ್ನು ಜಪ್ತು ಮಾಡಿದ ಸಮಯದಲ್ಲಿ ಲೇಬಲ್ ನಂಬರಗಳನ್ನು ಮಹಜರನಲ್ಲಿ ನಮೂದು ಮಾಡಿರುವುದಿಲ್ಲ. ಪ್ರತಿಯೊಂದು ಪ್ಯಾಕೇಟಗಳ ಮೇಲೆ ಸಿರಿಯಲ್ ನಂಬರ ಇರುತ್ತದೆ ಅದರಿಂದ ಯಾವ ಅಂಗಡಿಗೆ ಸರಬರಾಜ ಆಗಿರುತ್ತದೆಂದು ಕಂಡು ಹಿಡಿಯಬಹುದು ಎಂದರೆ ಸರಿ. ನನ್ನ ತನಿಖಾ ಸಮಯದಲ್ಲಿ ಸದರಿ ಮು. ಮಾ. ಯಾರ ಅಂಗಡಿಗೆ ಸರಬರಾಜ ಆಗಿರುತ್ತದೆಂದು ವಿಚಾರಣೆ ಮಾಡಿರುವುದಿಲ್ಲ.

ಮು ಮಾ. ಗಳ ಮೇಲೆ ಇರುವ ಸಿರಿಯಲ್ ನಂಬರ ಅನ್ನು ಮಹಜರನಲ್ಲಿ ನಮೂದು ಮಾಡಿಲ್ಲ ನ್ಯಾಯಾಲಯದ ಮುಂದೆ ಇರುವ ಮು. ಮಾ. ಗಳನ್ನು ಜಪ್ತು ಮಾಡಿರುತ್ತಾರೆಂದು ಯಾವ ಆದಾರದ ಮೇರೆಗೆ ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಲೀಸ್ಟನಲ್ಲಿ ನಮೂದು ಇರುತ್ತದೆಂದು ಹೇಳುತ್ತಾರೆ. ಟೇಟ್ರಾ ಪ್ಯಾಕ ಮೇಲೆ ಗುರುತು ಹಚ್ಚಿ ಪಂಚರ ಸಹಿ ಪಡೆದಿರುವುದಿಲ್ಲ.ನಾನು ಅಂತಿಮ ವರದಿ ಸಲ್ಲಿಸುವಾಗ ಎಫ್.ಎಸ್.ಎಲ್ ವರದಿ ನೀಡಿರುವವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ನಾನು ಸ್ಥಳಕ್ಕೆ ಬೇಟಿ ನೀಡಿದಾಗ ಅಲ್ಲಿಯ ಸ್ಥಳೀಯರನ್ನು ಬೇಟಿ ಮಾಡಿ ವಿಚಾರಣೆ ಮಾಡಿರುತ್ತೇನೆ. ಪೆಟೆ ಅಂಗಡಿಯ ಸುತ್ತ ಮುತ್ತ ಏನು ಇದೆ ಎಂದು ನನಗೆ ಈಗ ನೆನಪಿಲ್ಲವೆಂದು ಹೇಳುತ್ತಾರೆ.

ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇರುವುದಿಲ್ಲ ಠಾಣೆಯಲ್ಲಿಯೇ ಕುಳಿತುಕೊಂಡು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಅಂತಿಮ ವರದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 8 ರಿಂದ 10 ಅವರ ಹೇಳಿಕೆಗಳನ್ನು ನನ್ನ ಇಷ್ಟಾನುಸಾರ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಮು. ಮಾ.ಗೂ ಆರೋಪಿಗೂ ಮತ್ತು ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲವೆಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.

ಕುಣಿಗಲ್.